# ಕರ್ನಾಟಕ ಸರ್ಕಾರದ ನಡವಳಿ

**ವಿಷಯ**:- ಎನ್‌ಪಿಎಸ್‌ಗೆ ಸಂಬಂಧಿಸಿದಂತೆ NSDL ರವರಿಗೆ ಪಾವತಿಸಬೇಕಾದ 2010-11ನೇ ಸಾಲಿನ ಜುಲೈ 2010 ರಿಂದ ಮಾರ್ಚ್ 2011ರವರೆಗಿನ ತ್ರೈಮಾಸಿಕ ಅವಧಿಯ ಸೇವಾ ಶುಲ್ಕದ ವೆಚ್ಚವನ್ನು ಭರಿಸುವ ಬಗ್ಗೆ.

---

**ಓದಲಾಗಿದೆ**:- 1) ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ (ಸ್ಪೆಷಲ್) 04 ಪಿಇಟಿ 2005 ದಿನಾಂಕ: 31.03.2006.

2) ಸರ್ಕಾರಿ ಆದೇಶ ಸಂಖ್ಯೆ:ಎಫ್‌ಡಿ (ಸ್ಪೆಷಲ್) 28 ಪಿಇಎನ್ 2009 ದಿನಾಂಕ:19.01.2010.

3) ಸರ್ಕಾರಿ ಆದೇಶ ಸಂಖ್ಯೆ:ಎಫ್‌ಡಿ (ಸ್ಪೆಷಲ್) 28 ಪಿಇಎನ್ 2009 ದಿನಾಂಕ:29.03.2010.

4) ಸರ್ಕಾರಿ ಆದೇಶ ಸಂಖ್ಯೆ:ಆಇ (ವಿ) 02 ಸಿಪಿಪಿ 2010 ದಿನಾಂಕ: 19.11.2010.

5) ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ವಿಶ್ವೇಶ್ವರಯ್ಯ ಕೇಂದ್ರ ಅವರ ಪತ್ರ ಸಂಖ್ಯೆ: ಖನಿ/ಎನ್‌ಪಿಎಸ್/28/10-11 ದಿನಾಂಕ: 23.09.2011 ಹಾಗೂ 13.10.2011.

**ಪ್ರಸ್ತಾವನೆ**:-

ಮೇಲೆ ಓದಲಾದ ಕ್ರಮ ಸಂಖ್ಯೆ 1 ರಲ್ಲಿನ ಸರ್ಕಾರಿ ಆದೇಶದಲ್ಲಿ ದಿನಾಂಕ: 1.4.2006 ರಂದು ಹಾಗೂ ತದ ನಂತರ ಸರ್ಕಾರಿ ಸೇವೆಗೆ ಸೇರಿದ ಎಲ್ಲಾ ಸರ್ಕಾರಿ ನೌಕರರಿಗೆ ನೂತನ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಹಾಗೂ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಆದೇಶ ದಿನಾಂಕ: 19.1.2010ರಲ್ಲಿ ನೂತನ ಪಿಂಚಣಿ ಯೋಜನೆ ಜಾರಿಗೊಳಿಸಿ ಮೇಲೆ ಕ್ರಮ ಸಂಖ್ಯೆ:3 ರಲ್ಲಿ ಓದಲಾದ ಆದೇಶದ ದಿನಾಂಕ: 29.3.2010ರಲ್ಲಿ ನೂತನ ಪಿಂಚಣಿ ಯೋಜನೆಯ ಮಾರ್ಗದರ್ಶನವನ್ನು ಕಾರ್ಯರೂಪಗೊಳಿಸಲಾಗಿದೆ. ಹಾಗೂ ಈ ನೂತನ ಪಿಂಚಣಿ ಯೋಜನೆಯ ಸಮಗ್ರ ಅನುಷ್ಠಾನಕ್ಕೆ ಖಜಾನೆ ನಿರ್ದೇಶಕರನ್ನು ಜವಾಬ್ದಾರರಾದ ರಾಜ್ಯ ನೂಡೆಲ್ ಅಧಿಕಾರಿಯಾಗಿ ನೇಮಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ:4 ರಲ್ಲಿ ಓದಲಾದ ಆದೇಶ ದಿನಾಂಕ:19.11.2010ರಲ್ಲಿ ನೂತನ ಪಿಂಚಣಿ ಯೋಜನೆಗೆ ಸಂಬಂಧಿಸಿದಂತೆ NSDL ರಾಜ್ಯ ಸರ್ಕಾರದ ನೂತನ ಪಿಂಚಣಿ ಯೋಜನೆಯ ಕೇಂದ್ರೀಯ ದಾಖಲೆ ನಿರ್ವಹಣಾ ಏಜೆನ್ಸಿ (CRA) ರವರಿಗೆ 2010-11ನೇ ಸಾಲಿನ ಏಪ್ರಿಲ್‌ನಿಂದ ಜೂನ್ 2010ರವರೆಗಿನ ಮೊದಲ ತ್ರೈಮಾಸಿಕ ಅವಧಿಯ ಸೇವಾ ಶುಲ್ಕದ ಮೊತ್ತ ರೂ.48,38,109/- (ನಲವತ್ತೆಂಟು ಲಕ್ಷದ ಮೂವತ್ತೆಂಟು ಸಾವಿರದ ನೂರ ಒಂಬತ್ತು ಮಾತ್ರ) ಗಳನ್ನು ಪಾವತಿಸಲು ಸರ್ಕಾರವು ಮಂಜೂರಾತಿ ನೀಡಲಾಗಿದೆ.

ಮೇಲೆ ಕ್ರಮ ಸಂಖ್ಯೆ:5 ರಲ್ಲಿ ಓದಲಾದ ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ವಿಶ್ವೇಶ್ವರಯ್ಯ ಕೇಂದ್ರ, ಬೆಂಗಳೂರು ಅವರ ಪತ್ರಗಳಲ್ಲಿ ನೂತನ ಪಿಂಚಣಿ ಯೋಜನೆಗೆ ಸಂಬಂಧಿಸಿದಂತೆ NSDL ಹಾಗೂ ಕರ್ನಾಟಕ ಸರ್ಕಾರಗಳ ನಡುವೆ ಎನ್‌ಪಿಎಸ್ ಸಂಬಂಧ ದಿನಾಂಕ:20.1.2010 ರಂದು ಒಡಂಬಡಿಕೆ ಸಹಿಯಾಗಿದ್ದು, ಈ ಒಪ್ಪಂದದ ಕಲಂ-6.1ರನ್ವಯ,

..2/-

NSDL ಇವರು ರಾಜ್ಯ ಸರ್ಕಾರದ ನೂತನ ಪಿಂಚಣಿ ಯೋಜನೆಯ ಕೇಂದ್ರೀಯ ದಾಖಲೆ ನಿರ್ವಹಣಾ ಏಜೆನ್ಸಿ (CRA) ಕಾರ್ಯ ನಿರ್ವಹಿಸುತ್ತಾ ಅವರ ಪತ್ರ ಸಂಖ್ಯೆ:ಎಸ್/ಕೆವಿ/201023207 ದಿನಾಂಕ:23.10.2010ರಲ್ಲಿ ಜುಲೈ 2010 ರಿಂದ ಸೆಪ್ಟೆಂಬರ್ 2010ರ ಅಂತ್ಯಕ್ಕೆ ರೂ.69,24,920/-ಗಳ (ಅರವತ್ತೊಂಬತ್ತು ಲಕ್ಷದ ಇಪ್ಪತ್ತನಾಲ್ಕು ಸಾವಿರದ ಒಂಬೈನೂರ ಇಪತ್ತು ಮಾತ್ರ) ಬಿಲ್ಲನ್ನು ಸಲ್ಲಿಸಿರುತ್ತಾರೆ ಎಂದು ತಿಳಿಸಿ ಸದರಿ ಬಿಲ್ಲಿನಲ್ಲಿ ವಾರ್ಷಿಕ PRA ನಿರ್ವಹಣಾ ವೆಚ್ಚದ ಮೊತ್ತವು ಹಾಗೂ ಎನ್‌ಪಿಎಸ್ ಘಟಕದಲ್ಲಿ ಸ್ವೀಕೃತವಾದ ಪ್ರಾನ್ ಸಂಖ್ಯೆಗಳ ಆಧಾರದ ಮೇಲೆ ಲೆಕ್ಕಾಚಾರ ಮಾಡಲಾದ ಮೊತ್ತಕ್ಕೂ ರೂ.48,043.34ಗಳ ವ್ಯತ್ಯಾಸವಿದ್ದು ಈ ಮೊತ್ತವನ್ನು ಪಾವತಿಯಿಂದ ಹೊರತುಪಡಿಸಬಹುದಾಗಿದ್ದು ಈ ಬಿಲ್ಲಿನ ಮೊತ್ತದಿಂದ ರೂ.48,043.34 ಮತ್ತು ಇದರ ಮೇಲಿನ ತೆರಿಗೆಗಳ ಮೊತ್ತ ಸೇರಿ ಒಟ್ಟು ರೂ.52,991/-ಗಳನ್ನು ಹೊರತುಪಡಿಸಿ ರೂ.68,71,929/-ಗಳನ್ನು ಪಾವತಿಸಲು ಮಂಜೂರಾತಿ ಕೋರಿದ್ದಾರೆ.

ಹಾಗೂ (CRA) ರವರ ಪತ್ರ ಸಂಖ್ಯೆ: ಎಎಸ್/ಕೆವಿ/20112851 ದಿನಾಂಕ: 25.01.2011ರ ಪತ್ರದಲ್ಲಿ ಆಕ್ಟೋಬರ್ 2010 ರಿಂದ ಡಿಸೆಂಬರ್ 2010ರ ಅಂತ್ಯಕ್ಕೆ ರೂ.80,96,839/-ಗಳ (ಎಂಬತ್ತು ಲಕ್ಷದ ತೊಂಬತ್ತಾರು ಸಾವಿರದ ಎಂಟನೂರ ಮೂವತ್ತೊಂಬತ್ತು ಮಾತ್ರ) ಬಿಲ್ಲನ್ನು ಸಲ್ಲಿಸಿರುತ್ತಾರೆ ಎಂದು ತಿಳಿಸುತ್ತಾ, ಈ ಬಿಲ್ಲಿನಲ್ಲಿ ವಾರ್ಷಿಕ PRA ನಿರ್ವಹಣಾ ವೆಚ್ಚದ ಮೊತ್ತವು ಹಾಗೂ ಎನ್‌ಪಿಎಸ್ ಘಟಕದಲ್ಲಿ ಸ್ವೀಕೃತವಾದ ಪ್ರಾನ್ ಸಂಖ್ಯೆಗಳ ಆಧಾರದ ಮೇಲೆ ಲೆಕ್ಕಾಚಾರ ಮಾಡಲಾದ ಮೊತ್ತಕ್ಕೂ ರೂ.4,324/- ವ್ಯತ್ಯಾಸವಿದ್ದು, ಈ ಮೊತ್ತವನ್ನು ಹಾಗೂ I-Pin/T-Pin ಮರುವಿತರಣೆ ನಿರ್ವಹಣೆಯು ಸಮರ್ಪಕವಾಗಿಲ್ಲದಿರುವುದರಿಂದ ರೂ. 2,200/-ಗಳ ಮೊತ್ತವನ್ನು ಕಟಾಯಿಸಲಾಗಿದೆ. HRMS ನವರು ನೀಡಿದ ಟ್ರಾನ್ಸಾಕ್ಷನ್ ಸಂಖ್ಯೆಗಳನ್ನೇ ಲೆಕ್ಕಕ್ಕೆ ತೆಗೆದುಕೊಂಡು ರೂ.7,56,432/-ಗಳನ್ನು ಪಾವತಿಯಿಂದ ಹೊರತುಪಡಿಸಬಹುದಾಗಿದ್ದು ಇದರ ಮೇಲಿನ ತೆರಿಗೆಗಳ ಮೊತ್ತ ಸೇರಿ ಒಟ್ಟು ರೂ.8,41,095/-ಗಳನ್ನು ಹೊರತುಪಡಿಸಿ ರೂ.72,55,744.00/-ಗಳನ್ನು ಪಾವತಿಸಲು ಖಜಾನೆ ನಿರ್ದೇಶಕರು ಸರ್ಕಾರದ ಮಂಜೂರಾತಿ ಕೋರಿದ್ದಾರೆ.

ಹಾಗೂ (CRA) ರವರ ಪತ್ರ ಸಂಖ್ಯೆ: ಬಿಎಂ/ಕೆವಿ/201114109 ದಿನಾಂಕ: 04.05.2011ರ ಪತ್ರದಲ್ಲಿ ಜನವರಿ 2011 ರಿಂದ ಮಾರ್ಚ್ 2011ರ ಅಂತ್ಯಕ್ಕೆ ರೂ.80,67,282/- (ಎಂಬತ್ತು ಲಕ್ಷದ ಅರವತ್ತೇಳು ಸಾವಿರದ ಎರಡುನೂರ ಎಂಬತ್ತೆರಡು ಮಾತ್ರ) ಗಳ ಬಿಲ್ಲನ್ನು ಸಲ್ಲಿಸಿರುತ್ತಾರೆ ಎಂದು ತಿಳಿಸುತ್ತಾ, ಸದರಿ ಬಿಲ್ಲಿನ ಮೊತ್ತದಲ್ಲಿ ವಾರ್ಷಿಕ PRA ನಿರ್ವಹಣಾ ವೆಚ್ಚದಲ್ಲಿ HRMS ನವರು ನೀಡಿದ ಟ್ರಾನ್ಸಾಕ್ಷನ್ ಸಂಖ್ಯೆಗಳನ್ನೇ ಲೆಕ್ಕಕ್ಕೆ ತೆಗೆದುಕೊಂಡು ರೂ.2,35,302/-ಗಳನ್ನು ಪಾವತಿಯಿಂದ ಹೊರತುಪಡಿಸಬಹುದಾಗಿದ್ದು, ವಾರ್ಷಿಕ PRA ನಿರ್ವಹಣಾ ವೆಚ್ಚದಲ್ಲಿ I-Pin/T-Pin ಮರುವಿತರಣೆ ನಿರ್ವಹಣೆಯು ಸಮರ್ಪಕವಾಗಿಲ್ಲದಿರುವುದರಿಂದ ರೂ.1,600/-ಗಳ ಮೊತ್ತವನ್ನು ಕಟಾಯಿಸಲಾಗಿದೆ. ಆದ್ದರಿಂದ ಬಿಲ್ಲಿನ ಮೊತ್ತ ಮತ್ತು ಇದರ ಮೇಲಿನ ತೆರಿಗೆಗಳ ಮೊತ್ತ ಸೇರಿ ಒಟ್ಟು ರೂ.2,68,270.54/-ಗಳನ್ನು ಹೊರತುಪಡಿಸಿ ರೂ.77,99,011.00/-ಗಳನ್ನು ಪಾವತಿಸಲು ಖಜಾನೆ ನಿರ್ದೇಶಕರು ಸರ್ಕಾರದ ಮಂಜೂರಾತಿ ಕೋರಿದ್ದಾರೆ.

..3/-

ಸರ್ಕಾರವು. ನಿರ್ದೇಶಕರು, ಖಜಾನೆ ನಿರ್ದೇಶನಾಲಯ ಅವರ ಪ್ರಸ್ತಾವನೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಆಇ (ವಿಶೇಷ) 06 ಸಿಪಿಪಿ 2011**
**ಬೆಂಗಳೂರು, ದಿನಾಂಕ: 18ನೇ ಆಕ್ಟೋಬರ್ 2011**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ನೂತನ ಪಿಂಚಣಿ ಯೋಜನೆಗೆ ಸಂಬಂಧಿಸಿದಂತೆ ಎನ್‌ಎಸ್‌ಡಿಎಲ್ ರಾಜ್ಯ ಸರ್ಕಾರದ ನೂತನ ಪಿಂಚಣಿ ಯೋಜನೆಯ ಕೇಂದ್ರೀಯ ದಾಖಲೆ ನಿರ್ವಹಣಾ ಏಜೆನ್ಸಿ (CRA) ರವರಿಗೆ 2010-11ನೇ ಸಾಲಿನ ಜುಲೈ 2010 ರಿಂದ ಸೆಪ್ಟಂಬರ್ 2010ರವರೆಗಿನ ತ್ರೈಮಾಸಿಕ ಅವಧಿಯ ಸೇವಾ ಶುಲ್ಕದ ಮೊತ್ತವಾದ ರೂ.68,71,929/-ಗಳನ್ನು (ಅರವತ್ತೆಂಟು ಲಕ್ಷದ ಎಪ್ಪತ್ತೊಂದು ಸಾವಿರದ ಒಂಬೈನೂರ ಇಪ್ಪತ್ತೊಂಬತ್ತು ಮಾತ್ರ) ಆಕ್ಟೋಬರ್ 2010 ಡಿಸೆಂಬರ್ 2010 ರವರೆಗಿನ ತ್ರೈಮಾಸಿಕ ಅವಧಿಯ ಸೇವಾ ಶುಲ್ಕದ ಮೊತ್ತವಾದ ರೂ. 72,55,744.00/-ಗಳನ್ನು (ಎಪ್ಪತ್ತೆರಡು ಲಕ್ಷದ ಐವತ್ತೈದು ಸಾವಿರದ ಏಳುನೂರ ನಲವತ್ತನಾಲ್ಕು ಮಾತ್ರ) ಹಾಗೂ ಜನವರಿ 2011 ರಿಂದ ಮಾರ್ಚ್ 2011ರವರೆಗಿನ ತ್ರೈಮಾಸಿಕ ಅವಧಿಯ ಸೇವಾ ಶುಲ್ಕದ ಮೊತ್ತವಾದ ರೂ.77,99,011.00/-ಗಳನ್ನು (ಎಪ್ಪತ್ತೇಳು ಲಕ್ಷದ ತೊಂಬತ್ತೊಂಬತ್ತು ಸಾವಿರದ ಹನ್ನೊಂದು ಮಾತ್ರ) ಪಾವತಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ. ಈ ಮೊತ್ತವನ್ನು ಕೇಂದ್ರೀಯ ದಾಖಲೆ ನಿರ್ವಹಣಾ ಏಜೆನ್ಸಿ (CRA) ರವರಿಗೆ ಪಾವತಿಸಲು ಉಪ ನಿರ್ದೇಶಕರು, ಎನ್‌ಪಿಎಸ್ ಇವರನ್ನು ಪ್ರಾಧಿಕರಿಸಲಾಗಿದೆ.

ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2071-01-117-0-01 ರ ಅಡಿಯಲ್ಲಿ ಭರಿಸತಕ್ಕದ್ದು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಪದ್ಮಾವತಿ)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಿಶ್ರಾಂತಿ ವೇತನ)

**ಇವರಿಗೆ:**

1. ಮಹಾಲೇಖಪಾಲರು (ಲೆಕ್ಕಪತ್ರ/ಲೆಕ್ಕಪರಿಶೋಧನೆ) ಕರ್ನಾಟಕ, ಬೆಂಗಳೂರು
2. ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ:ಅಂಬೇಡ್ಕರ್ ವೀಧಿ, ಬೆಂಗಳೂರು.
3. ಉಪ ನಿರ್ದೇಶಕರು, ಎನ್‌ಪಿಎಸ್ ಖಜಾನೆ ನಿರ್ದೇಶನಾಲಯ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಡಾ:ಅಂಬೇಡ್ಕರ್ ವೀಧಿ, ಬೆಂಗಳೂರು
4. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
5. ಕಛೇರಿ ಪ್ರತಿ, ಶಾಖೆಯ ರಕ್ಷಾ ಕಡತ, ಹೆಚ್ಚುವರಿ ಪ್ರತಿಗಳು.